ಓ ಎಸ್ ನಂಃ 24/2025
ಪಿ. ಡಬ್ಲ್ಯೂ-1

**(ಇಂದು ದಿನಾಂಕ 14-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ನಂಃ 1 ಮತ್ತು 3 ರವರ ಪರ ಶ್ರೀಮತಿ ಕೆ ಎಂ ಎಚ್ ವಕೀಲರಿಂದ**

ನಾನು ಮನಗುಂಡಿ ಗ್ರಾಮದಲ್ಲಿ ವಾಸವಿದ್ದೇನೆ . ನಾನು ಗೋಕುಲ ರಸ್ತೆಯಲ್ಲಿ ಕಳೆದ 10 ವರ್ಷಗಳಿಂದ ಮೊಬೈಲ ಅಂಗಡಿ ನಡೆಸುತ್ತಿದ್ದೇನೆ . ನನ್ನ ತಾಯಿ 2 ನೇ ಪ್ರತಿವಾದಿ ಮನಗುಂಡಿ ಗ್ರಾಮದಲ್ಲಿ ವಾಸವಿದ್ದಾರೆ .

ದಾವಾ ಸ್ವತ್ತುಗಳು ನನಗೆ ನನ್ನ ಅಜ್ಜನಿಂದ ಬಂದ ಆಸ್ತಿಗಳು ಆಗಿವೆ . ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ . ನಾನು ಮತ್ತು 1 ನೇ ಪ್ರತಿವಾದಿ ಒಂದೆ ಕಡೆ ವಾಸ ಮಾಡುತ್ತಿದ್ದು 1 ನೇ ಪ್ರತಿವಾದಿಗೆ ಮನೆ ಮಾಡಿಕೊಟ್ಟಿದ್ದೇನೆ . ಆ ತರಹ ಮನೆ ಕಟ್ಟಿ 20 ವರ್ಷ ಕಳೆಯಿತು ಅದನ್ನು ಕಳೆದ ವರ್ಷ ದುರಸ್ತಿ ಮಾಡಿಸಿದ್ದೇನೆ . 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಜೊತೆ ಇದ್ದಾರೆ . 2 ನೇ ಪ್ರತಿವಾದಿ ಹುಬ್ಬಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಅಲ್ಲಿಃಯೂ ಇರುತ್ತಾರೆ ಮನಗುಂಡಿಯಲ್ಲಿಯೂ ಇರುತ್ತಾರೆ ಎಂದು ಹೇಳುತ್ತಾರೆ . ನಾನು ಮತ್ತು 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಜೊತೆ ಮನಗುಂಡಿ ಗ್ರಾಮದಲ್ಲಿ ಎಂದಿಗೂ ವಾಸವಿಲ್ಲ ಎಂದರೆ ಸರಿಯಲ್ಲ . ದಾವಾ ಜಮೀನನ್ನು 1 ನೇ ಪ್ರತಿವಾದಿ ಸಾಗು ಮಾಡುತ್ತಿದ್ದು ಅದಕ್ಕೆ ನಾವು ಸಹಕರಿಸುತ್ತೇವೆ . 1 ನೇ ಪ್ರತಿವಾದಿ ಮಾತ್ರ ದಾವಾ ಜಮೀನನ್ನು ಸಾಗು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ . 3 ನೇ

ಪ್ರತಿವಾದಿ 1 ನೇ ಪ್ರತಿವಾದಿಯೊಂದಿಗೆ ಕಳೆದ 35-40 ವರ್ಷಗಳಿಂದ ಜೊತೆಯಾಗಿ ಜೀವನ ಮಾಡುತ್ತಿರುವ ವಿಷಯ ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿಗೆ ವಯಸ್ಸಾಗಿರುವ ಕಾರಣ ಅವರನ್ನು ನೋಡಿಕೊಳ್ಳುವವರು ಒಬ್ಬರು ಬೇಕು ಎಂದರೆ ಸಾಕ್ಷಿಯು ನಾವು ನೋಡಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ . 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಪೋಷಣೆ ಮಾಡುತ್ತಿರುವ ಕಾರಣ 1 ನೇ ಪ್ರತಿವಾದಿ ಭಕ್ಷಿಸ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಸದರಿ ಭಕ್ಷಿಸ ಪತ್ರವನ್ನು ಪ್ರಶ್ನೆ ಮಾಡಿದ್ದೇವೆ . ಕಂದಾಯ ಇಲಾಖೆಯವರು ನಾವು ಮಾಡಿದ ತಕರಾರನ್ನು ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಿ ಎಂದು ಸೂಚಿಸಿದ ಮೇರೆಗೆ ಈ ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿ . ದಾವಾ ಸ್ವತ್ತುಗಳ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.